ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161	ಮೈಸೂರು, ಬುಧವಾರ, ೦೪, ಮಾರ್ಚ್, ೨೦೨೬ (ಫಾಲ್ಗುಣ, ೧೩, ಶಕವರ್ಷ, ೧೯೪೭) MYSURU, WEDNESDAY , 04, MARCH, 2026 (PHALGUNA, 13, SHAKAVARSHA, 1947)	ಸಂಚಿಕೆ ೧೯ Issue 19

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಕರ್ನಾಟಕ ಸರ್ಕಾರ

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ.

ಬಿ.ಎಂ.ರಸ್ತೆ, ಹಾಸನ 573201

ಸಂ:ಹಾನಪ್ರಾ/ನಯೋವಿ/ಮ.ಯೋ.(ಪ–2)/(ಜಿ.ಐ.ಎಸ್/02/2025–26 ದಿನಾಂಕ:09.01.2026

ಃಃ ಸಾರ್ವಜನಿಕ ಪ್ರಕಟಣೆ ಃಃ

ವಿಷಯ: ಹಾಸನ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಹೆಚ್ಚುವರಿಯಾಗಿ 24 ಗ್ರಾಮಗಳನ್ನು ಸೇರಿಸಿ ಒಟ್ಟು 66 ಗ್ರಾಮಗಳನ್ನೊಳಗೊಂಡಂತೆ ಹಾಲಿ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಗಳನ್ನು ವಿಸ್ತರಿಸಿಕೊಳ್ಳಲಾಗಿದ್ದು, ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆಯನ್ನು ತಯಾರಿಸುವ ಉದ್ದೇಶವನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 10(1)ರನ್ವಯ ಘೋಷಿಸುವ ಬಗ್ಗೆ.

****

ಹಾಸನ ನಗರಕ್ಕೆ ಸ್ಥಳೀಯ ಯೋಜನಾ ಪ್ರದೇಶವೆಂದು ಸರ್ಕಾರದ ಅಧಿಸೂಚನೆ ಸಂಖ್ಯೆ: **ಊಒಂ/36/ಖಿಖಿಕ/76 ಅಚಿಣಜ:28.06.1976** ರಲ್ಲಿ ಘೋಷಿಸಲಾಗಿದೆ. ಹಾಗೂ ಸರ್ಕಾರದ ಆದೇಶ ಸಂ:ನಅಇ/305/ಮೈಅಪ್ರಾ/2014 ದಿನಾಂಕ:13.04.2017ರಲ್ಲಿ ಹಾಸನ ನಗರಕ್ಕೆ ಮಹಾಯೋಜನೆ(ಪರಿಷ್ಕೃತ–1)ಕ್ಕೆ ಅನುಮೋದನೆ ದೊರೆತಿದ್ದು, ಸರ್ಕಾರದ ಅಧಿಸೂಚನೆ ಸಂ:ನಅಇ/200/ಮೈಅಪ್ರಾ/2023 ದಿನಾಂಕ:10.01.2024 ರನ್ವಯ ಪ್ರಸ್ತುತ ಹಾಸನ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಹೆಚ್ಚುವರಿಯಾಗಿ 24 ಗ್ರಾಮಗಳನ್ನು ಸೇರಿಸಿ ಒಟ್ಟು 66 ಗ್ರಾಮಗಳನ್ನೊಳಗೊಂಡಂತೆ ವಿಸ್ತರಿಸಿ, ಸರ್ಕಾರದಿಂದ ಅನುಮೋದನೆಯಾಗಿರುತ್ತದೆ. ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶಕ್ಕೆ ಜಿ.ಐ.ಎಸ್. ಆಧಾರಿತ ಪರಿಷ್ಕೃತ ಮಹಾಯೋಜನೆ ನಕ್ಷೆ ತಯಾರಿಸಲು ಉದ್ದೇಶಿಸಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment WPP No. 297

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಯಪಡಿಸುವುದೆನೆಂದರೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 10(1)ರನ್ವಯ, ಹಾಸನ ನಗರಕ್ಕೆ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶವನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 4(ಎ) ರನ್ವಯ ಘೋಷಿಸುವ ಸಂಬಂಧ ಸರ್ಕಾರದ ಅಧಿಸೂಚನೆ ಸಂ:ನಅಇ/200/ಮೈಅಪ್ರಾ/2023 ದಿ:10.01.2024 ರಲ್ಲಿ, ಹಾಸನ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4ಎ(1) ರನ್ವಯ ಹಾಲಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಹೆಚ್ಚುವರಿಯಾಗಿ 24 ಗ್ರಾಮಗಳನ್ನು ಸೇರಿಸಿ ಒಟ್ಟು 66 ಗ್ರಾಮಗಳನ್ನೊಳಗೊಂಡಂತೆ ಹಾಲಿ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಗಳನ್ನು ವಿಸ್ತರಿಸಿಕೊಳ್ಳಲಾಗಿದ್ದು, ಹಾಸನ ನಗರದ ಎಲ್ಲೆಯನ್ನು ವಿಸ್ತರಿಸಿದ 24 ಗ್ರಾಮಗಳ ಸ್ಥಳೀಯ ಯೋಜನಾ ಪ್ರದೇಶಕ್ಕೆ ಜಿ.ಐ.ಎಸ್. ಆಧಾರಿತ ಮಹಾಯೋಜನೆಯನ್ನು ತಯಾರಿಸಲು ಉದ್ದೇಶಿಸಲಾಗಿರುವುದರಿಂದ, ಸದರಿ ಗ್ರಾಮಗಳ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಂಬಂಧಿಸಿದಂತೆ ಮಹಾಯೋಜನೆಯನ್ನು ತಯಾರಿಸಲು ಸಾರ್ವಜನಿಕ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯಲ್ಲಿ ಖುದ್ದಾಗಿಯಾಗಲೀ ಅಥವಾ ನೊಂದಾಯಿತ ಅಂಚೆಯ ಮೂಲಕವಾಗಲೀ ಈ ಪ್ರಕಟಣೆ ದಿನಾಂಕದಿಂದ 60(ಅರವತ್ತು) ದಿನಗಳೊಳಗಾಗಿ ಸ್ವೀಕರಿಸಲಾಗುತ್ತದೆ. ಅವಧಿಯ ನಂತರ ಬರುವಂತಹ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸ್ಥಳೀಯ ಯೋಜನಾ ಪ್ರದೇಶಕ್ಕೆ ವಿಸ್ತರಿಸಿದ ಗ್ರಾಮಗಳ ವಿವರಗಳು

ಹೂವಿನಹಳ್ಳಿ, ಹೂವಿನಹಳ್ಳಿ ಕಾವಲು, ಕೋರಹಳ್ಳಿ, ತೇಜೂರು, ಗ್ಯಾರಹಳ್ಳಿ, ಮುಗ್ಗನಹಳ್ಳಿ, ಕಂಚಮಾರನಹಳ್ಳಿ, ದೊಡ್ಡಕೊಂಡಗುಳ, ಯಡಿಯೂರು, ದೊಡ್ಡಹೊನ್ನೇನಹಳ್ಳಿ, ಚಿಟ್ಟನಹಳ್ಳಿ, ನಿಡೂಡಿ, ಪಿರುಮನಹಳ್ಳಿ, ಹನುಮಂತಪುರ, ಸಿಂಗಪಟ್ಟಣ, ನಾಗತವಳ್ಳಿ (ಭಾಗಶಃ ಸರ್ವೆ ನಂ: 01 ರಿಂದ 41 ಮತ್ತು 56 ರಿಂದ 66) ಬಿದರಕೆರೆ, ಹಾಚಗೊಂಡನಹಳ್ಳಿ, ಚಿನ್ನೇನಹಳ್ಳಿ, ಅತ್ತಿಹಳ್ಳಿ, ಬೊಮ್ಮೇನಹಳ್ಳಿ, ಲಕ್ಷ್ಮೀಸಾಗರ ಊಯಿಗೌಡನಹಳ್ಳಿ ಮತ್ತು ರಾಚೇನಹಳ್ಳಿ

ಸಹಿ/–
ನಗರ ಯೋಜಕ ಸದಸ್ಯರು,
ನಗರಾಭಿವೃದ್ಧಿ ಪ್ರಾಧಿಕಾರ,
ಹಾಸನ.

ಸಹಿ/–
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಹಾಸನ.

ಸಹಿ/–
(ಪಟೇಲ್ ಶಿವಣ್ಣ)
ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ,
ಹಾಸನ.

PD-21

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY NELAMANGALA MUNIDALAPPA